# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- 2021-22ನೇ ಸಾಲಿನ ಏಕರೂಪ ಅನುಸೂಚಿತ ದರಪಟ್ಟಿಯ ಪ್ರಕಟಣೆ ಬಗ್ಗೆ.

ಓದಲಾಗಿದೆ. –1. ಸರ್ಕಾರದ ಆದೇಶ ಸಂಖ್ಯೆ ಪಿಡಬ್ಲ್ಯುಡಿ 65 ಆರ್‌ಡಿಎಫ್ 2018 ದಿನಾಂಕ 04-04-2019

2. ಸರ್ಕಾರದ ಆದೇಶ ಸಂಖ್ಯೆ ಆಇ 259 ಆಕೋ-2/2018 ದಿನಾಂಕ 17-02-2020.
3. ಮುಖ್ಯ ಇಂಜಿನಿಯರ್, ಜಲಸಂಪನ್ಮೂಲ ಅಭಿವೃದ್ಧಿ ಸಂಸ್ಥೆ ಇವರ ಪತ್ರ ದಿನಾಂಕ 31-03-2022.
4. ಪ್ರಧಾನ ವ್ಯವಸ್ಥಾಪಕರು,(ವಿ), ಗುಣಮಟ್ಟ, ಪ್ರಮಾಣಿತ & ಸುರಕ್ಷತೆ, ಬೆಸ್ಕಾಂ, ಬೆಂಗಳೂರು ಇವರ ಪತ್ರ ದಿನಾಂಕ 31-03-2022.
5. ಅಧೀಕ್ಷಕ ಇಂಜಿನಿಯರ್, ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಇವರ ಪತ್ರ ದಿನಾಂಕ 31-03-2022.
6. ಪ್ರಧಾನ ಮುಖ್ಯ ಅರಣ್ಯ ಸಂಕರಕ್ಷಣಾಧಿಕಾರಿ (ಅಭಿವೃದ್ಧಿ) ಇವರ ಪತ್ರ ದಿನಾಂಕ 31-03-2022

******

**ಪೀಠಿಕೆ:-**

ರಾಜ್ಯದ ಪ್ರಮುಖ ಇಲಾಖೆಗಳಾದ ಲೋಕೋಪಯೋಗಿ ಇಲಾಖೆ, ಜಲಸಂಪನ್ಮೂಲ ಇಲಾಖೆ, ನಗರಾಭಿವೃದ್ಧಿ ಇಲಾಖೆ, ವಸತಿ ಇಲಾಖೆ, ಇಂಧನ ಇಲಾಖೆ ಮುಂತಾದವುಗಳು ತಮ್ಮದೇ ಆದ ಅನುಸೂಚಿ ದರಗಳನ್ನು (Schedule of Rates) ತಯಾರಿಸಿದ್ದು, ವಿವಿಧ ಕಾಮಗಾರಿಗಳ ಅಂದಾಜುಗಳ ತಯಾರಿಕೆಯಲ್ಲಿ ಬೇರೆ ಬೇರೆ ಇಲಾಖೆಗಳ ದರಗಳನ್ನು ಅಳವಡಿಸಿ ಅಂದಾಜುಗಳನ್ನು ತಯಾರಿಸಲಾಗುತ್ತಿದೆ. GST ಅನುಷ್ಠಾನವಾದ ನಂತರದ ಅವಧಿಯಲ್ಲಿ ಒಂದು ಇಲಾಖೆಯಲ್ಲಿ GST ಪೂರ್ವ ದರಗಳಿದ್ದಲ್ಲಿ, ಲೋಕೋಪಯೋಗಿ ಇಲಾಖೆಯಲ್ಲಿ GST ನಂತರದ ದರಗಳೂ ಅಸ್ತಿತ್ವದಲ್ಲಿವೆ.

ಇದರಿಂದ ಅಂದಾಜುಗಳನ್ನು ತಯಾರಿಸಲು ಮತ್ತು ಟೆಂಡರ್ ಮೌಲ್ಯಮಾಪನ ಮಾಡುವಲ್ಲಿ ಅನೇಕ ಸಮಸ್ಯೆಗಳು ಉದ್ಭವವಾಗುತ್ತಿವೆ. ಈ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಏಕರೂಪ ಸಮಗ್ರ ಅನುಸೂಚಿ ದರಗಳನ್ನು ತಯಾರಿಸಿ ಪ್ರಕಟಿಸುವುದು ಸೂಕ್ತವೆಂದು ನಿರ್ಧರಿಸಲಾಗಿದ್ದು, ಮೇಲೆ ಓದಲಾದ ಕ್ರ.ಸಂ-1ರ ಆದೇಶದಂತೆ ಲೋಕೋಪಯೋಗಿ ಇಲಾಖೆಯನ್ನು ನೋಡಲ್ ಇಲಾಖೆಯನ್ನಾಗಿ ನೇಮಿಸಿ, ಎಲ್ಲಾ ಪ್ರಮುಖ ಇಲಾಖೆಗಳ ಪ್ರತಿನಿಧಿಗಳನ್ನೊಳಗೊಂಡ ಸಮಿತಿಯನ್ನು ರಚಿಸಿ, ಸದರಿ ಸಮಿತಿ ಮೂಲಕ ಸಮಗ್ರವಾದ ಅನುಸೂಚಿ ದರಗಳನ್ನು ತಯಾರಿಸಿ ಪ್ರಕಟಿಸಲು ನಿರ್ಧರಿಸಲಾಯಿತು. ಅದರಂತೆ ಕೆಳಕಂಡ ಸಮಿತಿಗಳನ್ನು ಮೇಲೆ ಓದಲಾದ ಸರ್ಕಾರದ ಆದೇಶ-1ರಂತೆ ರಚಿಸಲಾಯಿತು.

1. ಅನುಸೂಚಿ ದರಗಳ ರಚನಾ ಸಮಿತಿ- ಸರ್ಕಾರದ ಕಾರ್ಯದರ್ಶಿಗಳು, ಲೋಇ ಇವರ ಅಧ್ಯಕ್ಷತೆ



Scanned with CamScanner

2. ಅನುಸೂಚಿ ದರಗಳ ಪರಿಶೀಲನಾ ಸಮಿತಿ:- ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಲೋಇ ಇವರ ಅಧ್ಯಕ್ಷತೆ.

ಈ ಸಮಿತಿಗಳು ಅನುಸೂಚಿ ದರಗಳ ತಯಾರಿ ಮತ್ತು ಪ್ರಕಟಣೆ ಕುರಿತು ಅಗತ್ಯ ಕ್ರಮವನ್ನು ಶೀಘ್ರವಾಗಿ ತೆಗೆದುಕೊಳ್ಳುವಂತೆ ಮತ್ತು ಸದರಿ ಅನುಸೂಚಿ ದರಗಳ ತಯಾರಿ ಕಾರ್ಯವನ್ನು 3 ತಿಂಗಳೊಳಗಾಗಿ ಅಂತಿಮಗೊಳಿಸಿ ದಿನಾಂಕ 01-06-2019ರಿಂದ ಕಡ್ಡಾಯವಾಗಿ ಜಾರಿಗೊಳಿಸಲು ಮೇಲ್ಕಂಡ ಆದೇಶಗಳಲ್ಲಿ ತಿಳಿಸಲಾಗಿದೆ.

ದಿನಾಂಕ 05-02-2020ರಂದು ಸರ್ಕಾರದ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ (ವೆಚ್ಚ) ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಏಕರೂಪ ಅನುಸೂಚಿ ದರಗಳನ್ನು ತಯಾರಿಸುವ ನಿಟ್ಟಿನಲ್ಲಿ ಏಕರೂಪ ಅನುಸೂಚಿ ದರಗಳನ್ನು ತಯಾರಿಸಲು ತಾಂತ್ರಿಕ ಕಾರ್ಯನಿರತ ತಂಡವನ್ನು (Technical Working Group) ರಚಿಸಲು ಮೇಲೆ ಓದಲಾದ ಸರ್ಕಾರದ ಆದೇಶ-2ರಂತೆ ಶ್ರೀ ಆರ್. ಜೈಪ್ರಸಾದ್, ನಿವೃತ್ತ ಪ್ರಧಾನ ಇಂಜಿನಿಯರ್, ಇವರ ಅಧ್ಯಕ್ಷತೆಯಲ್ಲಿ ವಿವಿಧ ಇಲಾಖೆಗಳ ನಿವೃತ್ತ ಹಾಗೂ ಅಧಿಕಾರಿಗಳನ್ನು ಒಳಗೊಂಡಂತೆ ಆದೇಶ ಹೊರಡಿಸಲಾಯಿತು. ಅಧೀಕ್ಷಕ ಇಂಜಿನಿಯರ್, ಲೋಇ ವೃತ್ತ, ಬೆಂಗಳೂರು ಇವರು ಈ ತಂಡದ ಸದಸ್ಯ ಕಾರ್ಯದರ್ಶಿ/ಸಮನ್ವಯಾಧಿಕಾರಿಯನ್ನಾಗಿ ಸಹ ನೇಮಿಸಲಾಯಿತು. ಸದರಿ ತಂಡವು ಮಾರ್ಚ್-2020ರ ಮಾಹೆಯೊಳಗೆ ಏಕರೂಪ ದರಪಟ್ಟಿಯನ್ನು ತಯಾರಿಸಿ ಸರ್ಕಾರಕ್ಕೆ ಮುಂದಿನ ಕ್ರಮಕ್ಕಾಗಿ ಸಲ್ಲಿಸಲು ಸಹ ಸೂಚಿಸಲಾಯಿತು.

ತಾಂತ್ರಿಕ ಕಾರ್ಯನಿರತ ತಂಡವು ವಿವಿಧ ಇಲಾಖೆಗಳ ಒಟ್ಟು 32 ದರಪಟ್ಟಿಗಳನ್ನು ಅಧ್ಯಯನ ಮಾಡಿ, ಆಯಾ ಇಲಾಖೆಯ ಅಧಿಕಾರಿಗಳೊಂದಿಗೆ ಸಮಾಲೋಚಿಸಿ, ವಿವಿಧ ಇಲಾಖೆಗಳನ್ನು ಒಗ್ಗೂಡಿಸಿ, ರಾಜ್ಯವ್ಯಾಪಿ ಏಕರೂಪ ಅನುಸೂಚಿತ ದರಪಟ್ಟಿಯನ್ನು ಕೆಳಕಂಡಂತೆ ತಯಾರಿಸಲು ನಿರ್ಧರಿಸಿತು.

| SR's OF ORGANIZATIONS CONCERNED UNDER | NODAL ORGANIZATION |
|---|---|
| PWD (C&B), NH & PRED | PWD |
| WRDO, MI & KPCL | WRDO |
| BWSSB , KUWSDB & RWS | BWSSB |
| KPTCL, ESCOMS, PWD ELECTRICAL | BESCOM |
| PORTS & IWTD & Airports | PORTS |
| FOREST, WATERSHED, HORTICULTURE | FOREST |

ಮೇಲೆ ತಿಳಿಸಿದಂತೆ ವಿವಿಧ ಇಲಾಖೆಗಳನ್ನು ಒಗ್ಗೂಡಿಸಿ 6 ಏಕರೂಪ ಅನುಸೂಚಿತ ದರಗಳನ್ನು ತಯಾರಿಸಲು ನಿರ್ಧರಿಸಲಾಯಿತು. ಹಾಗೂ ವಿವಿಧ ಇಲಾಖೆಗಳು ತಮ್ಮ ಹಿಂದಿನ ದರಪಟ್ಟಿಯ ತಯಾರಿಕೆಯಲ್ಲಿ ಅಳವಡಿಸಿಕೊಳ್ಳುತ್ತಿದ್ದ ಕೆಳಕಂಡ ಅಂಶಗಳನ್ನು ಪರಿಶೀಲಿಸಿ rationalization ಮಾಡಲಾಗಿರುತ್ತದೆ.

- ನಿರ್ಮಾಣ ಸಾಮಗ್ರಿಗಳ ದರಗಳನ್ನು ಎಲ್ಲಾ ಇಲಾಖೆಗಳಿಗೆ ಅನ್ವಯವಾಗುವಂತೆ ಏಕರೂಪ ದರಪಟ್ಟಿಯಲ್ಲಿ ಅಳವಡಿಸಿದೆ.



Scanned with CamScanner

- ಕೂಲಿ ಕಾರ್ಮಿಕರ ದರಗಳನ್ನು ಕಾರ್ಮಿಕ ಇಲಾಖೆಯು ಪ್ರಕಟಿಸಿರುವಂತೆ ಕನಿಷ್ಟ ದರಗಳನ್ನು ಸಹ ಏಕರೂಪ ದರಪಟ್ಟಿಯಲ್ಲಿ ಅವಳಡಿಸಲಾಗಿದೆ.
- Ministry of Road Transport and Highways-2019 Standard data book ತಂತ್ರಾಂಶದಂತೆ ಯಂತ್ರೋಪಕರಣಗಳ ಬಾಡಿಗೆ ದರಗಳನ್ನು ಏಕರೂಪ ದರಪಟ್ಟಿಯಲ್ಲಿ ಅಳವಡಿಸಲಾಗಿದೆ.
- ಗುತ್ತಿಗೆದಾರರ ಲಾಭಾಂಶವನ್ನು ಗರಿಷ್ಟ ಶೇ10% ಅಥವಾ ಆಯಾ ಇಲಾಖೆಗಳು ನಿಗಧಿಪಡಿಸಿರುವ ಇವುಗಳಲ್ಲಿ ಯಾವುದು ಕಡಿಮೆ ಏಕರೂಪ ದರಪಟ್ಟಿಯಲ್ಲಿ ಅಳವಡಿಸಲಾಗಿದೆ.
- Overhead charges ದರಗಳನ್ನು ಗರಿಷ್ಟ ಶೇ10% ಅಥವಾ ಆಯಾ ಇಲಾಖೆಗಳು ನಿಗಧಿಪಡಿಸಿರುವ ಇವುಗಳಲ್ಲಿ ಯಾವುದು ಕಡಿಮೆಯೋ ಅದನ್ನು ಏಕರೂಪ ದರಪಟ್ಟಿಯಲ್ಲಿ ಅಳವಡಿಸಲಾಗಿದೆ.
- Area specific loading ಅಂಶವನ್ನು ಎಲ್ಲ ಇಲಾಖೆಗಳ ಕಾಮಗಾರಿಗಳಿಗೆ ಅನ್ವಯವಾಗುವಂತೆ ಏಕರೂಪ ದರಪಟ್ಟಿಯಲ್ಲಿ ಅಳವಡಿಸಲಾಗಿದೆ.
- Earth work, Cement concrete items with shuttering and surveying ಐಟಂಗಳನ್ನು ಸಹ ಈ ದರಪಟ್ಟಿಯಲ್ಲಿ ಎಲ್ಲ ಇಲಾಖೆಗಳಿಗೆ ಅನ್ವಯವಾಗುವಂತೆ ಅಳವಡಿಸಿರುತ್ತದೆ.
- ಇತರೆ ಇಂಜಿನಿಯರಿಂಗ್ ಇಲಾಖೆಗಳು ತಮ್ಮ ಕಾರ್ಯಕ್ಷೇತ್ರಕ್ಕೆ ಅವಶ್ಯವಿರುವಂತಹ specific construction materials and itemsಗಳನ್ನು ತಮ್ಮ ದರಪಟ್ಟಿಯಲ್ಲಿ ಪ್ರತ್ಯೇಕವಾಗಿ ಅಳವಡಿಸಿಕೊಳ್ಳಲಾಗಿದೆ.

ಮೇಲಿನ ಅಂಶಗಳನ್ನು ಪರಿಗಣಿಸಿ ದಿನಾಂಕ 14-01-2022ರಂದು ನಡೆದ ಏಕರೂಪ ಅನುಸೂಚಿ ದರಗಳ ರಚನಾ ಸಮಿತಿಯ ಸಭೆಯಲ್ಲಿ ಆಯಾ ಇಲಾಖೆಗಳು ತಯಾರಿಸಿರುವ ಏಕರೂಪ ದರಪಟ್ಟಿಯನ್ನು ಏಕರೂಪ ದರಪಟ್ಟಿಗೆ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದು ಆಯಾ ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಚಿಸಲಾಯಿತು. ಹಾಗೂ ಈ ದರಪಟ್ಟಿಯ ಬಗ್ಗೆ ವಿವಿಧ stake holdersಗಳ ಅಭಿಪ್ರಾಯ/ ಸಲಹೆ/ ಆಕ್ಷೇಪಣೆಗಳನ್ನು ಪಡೆಯಲು ನಿರ್ಧರಿಸಲಾಗಿದೆ. ಅದರಂತೆ ಜಲಸಂಪನ್ಮೂಲ ಇಲಾಖೆ, ಅರಣ್ಯ ಇಲಾಖೆಗಳು ಕರಡು ದರಪಟ್ಟಿಯನ್ನು ತಮ್ಮ ಇಲಾಖೆಗಳ ಜಾಲತಾಣದಲ್ಲಿ ಪ್ರಕಟಿಸಿರುತ್ತವೆ. ಹಾಗೂ Escom ದರಪಟ್ಟಿಯ ಬಗ್ಗೆ stake holdersಗಳೊಂದಿಗೆ ಚರ್ಚಿಸಿ ಅಂತಿಮಗೊಳಿಸಲಾಗಿದೆ.

ಮೇಲೆ ಓದಲಾದ ಉಲ್ಲೇಖ-3ರ ಪತ್ರದಲ್ಲಿ ಜಲಸಂಪನ್ಮೂಲ ಇಲಾಖೆಯ (ಜಲಸಂಪನ್ಮೂಲ ಇಲಾಖೆ, ಸಣ್ಣ ನೀರಾವರಿ ಇಲಾಖೆ ಮತ್ತು ಕೆಪಿಸಿಎಲ್ ಇಲಾಖೆಗಳು ಒಳಗೊಂಡಂತೆ) ಅನುಸೂಚಿತ ಏಕರೂಪ ದರಪಟ್ಟಿ-ಸಂಪುಟ IV, ಉಲ್ಲೇಖ-4ರ ಪತ್ರದಲ್ಲಿ ಬೆಸ್ಕಾಂ (ಎಸ್ಕಾಂ, ಕೆಪಿಟಿಸಿಎಲ್ ಮತ್ತು ಲೋಕೋಪಯೋಗಿ ವಿದ್ಯುತ್ ದರಪಟ್ಟಿ) ಸಂಸ್ಥೆಯು ಅನುಸೂಚಿತ ಏಕರೂಪ ದರಪಟ್ಟಿ ಸಂಪುಟ-VI, ಅಧೀಕ್ಷಕ ಇಂಜಿನಿಯರ್, ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಇವರು ಏಕರೂಪ ಅನುಸೂಚಿ ದರಪಟ್ಟಿ ಸಂಪುಟ-VII (ಬಂದರು ಮತ್ತು ವಿಮಾನ ನಿಲ್ದಾಣ ದರಪಟ್ಟಿ) ಹಾಗೂ ಉಲ್ಲೇಖ-5ರ ಪತ್ರದಲ್ಲಿ ಪ್ರಧಾನ ಮುಖ್ಯ ಅರಣ್ಯ ಸಂಕರಕ್ಷಣಾಧಿಕಾರಿ (ಅಭಿವೃದ್ಧಿ) ಇವರು ಏಕರೂಪ ಅನುಸೂಚಿ ದರಪಟ್ಟಿ ಸಂಪುಟ-VIII (ಅರಣ್ಯ, ತೋಟಗಾರಿಕೆ ಮತ್ತು ಜಲಾಯನ ಪ್ರದೇಶ ದರಪಟ್ಟಿ)ಗಳಿಗೆ ಅನುಮೋದನೆ



Scanned with CamScanner

ಕೋರಿ ಕರಡು ದರಪಟ್ಟಿಗಳನ್ನು ಏಕರೂಪ ಅನುಸೂಚಿ ದರಗಳ ಪರಿಶೀಲನಾ ಸಮಿತಿಗೆ ಸಲ್ಲಿಸಲಾಗಿದೆ.

ದಿನಾಂಕ 31-03-2022ರಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಲೋಕೋಪಯೋಗಿ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ನಡೆದ ಏಕರೂಪ ಅನುಸೂಚಿತ ದರಗಳ ಪರಿಶೀಲನಾ ಸಮಿತಿಯ ಸಭೆಯಲ್ಲಿ ಏಕರೂಪ ಅನುಸೂಚಿತ ದರಪಟ್ಟಿಗಳನ್ನು ಪರಿಶೀಲಿಸಿ ಚರ್ಚಿಸಿದ್ದು, ಜಲಸಂಪನ್ಮೂಲ ಇಲಾಖೆಯ ಏಕರೂಪ ದರಪಟ್ಟಿ ಸಂಪುಟ IV, ಬೆಸ್ಕಾಂನ ಏಕರೂಪ ದರಪಟ್ಟಿ ಸಂಪುಟ- VI, ಬಂದರು ಮತ್ತು ವಿಮಾನ ನಿಲ್ದಾಣ ಏಕರೂಪ ದರಪಟ್ಟಿ ಸಂಪುಟ- VII ಮತ್ತು ಅರಣ್ಯ ಇಲಾಖೆಯ ಏಕರೂಪ ದರಪಟ್ಟಿ ಸಂಪುಟ- VIII ಅಂಗೀಕರಿಸಿ ತಕ್ಷಣದಿಂದ ಜಾರಿಗೆ ತರಲು ನಿರ್ಧರಿಸಲಾಗಿರುತ್ತದೆ.

ಈ ವಿವರಗಳನ್ನು ಪರಿಶೀಲಿಸಿ ಕೆಳಕಂಡಂತೆ ಆದೇಶಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ ಲೋಇ 51 ಆರ್‌ಡಿಎಫ್ 2019, ಬೆಂಗಳೂರು**
**ದಿನಾಂಕ 31-03-2022**

ತಾಂತ್ರಿಕ ಕಾರ್ಯನಿರತ ತಂಡದ ಮಾರ್ಗದರ್ಶನದಲ್ಲಿ ತಯಾರಿಸಿರುವ 2021-22ನೇ ಸಾಲಿನ ಈ ಕೆಳಕಂಡ ಏಕರೂಪ ದರಪಟ್ಟಿಗಳ ಸಂಪುಟಗಳನ್ನು ರಾಜ್ಯವ್ಯಾಪಿ ಎಲ್ಲ ಇಲಾಖೆಗಳಿಗೆ ಅನ್ವಯವಾಗುವಂತೆ ತಕ್ಷಣದಿಂದ ಹಾಗೂ ಮುಂದಿನ ಆದೇಶದವರೆಗೆ ಜಾರಿಗೆ ತರಲಾಗಿದೆ.

| SR's OF ORGANIZATIONS CONCERNED UNDER | NODAL ORGANIZATION | Volume |
|---|---|---|
| WRDO, MI & KPCL | WRDO | IV |
| KPTCL, ESCOMS, PWD ELECTRICAL | BESCOM | VI |
| PORTS & IWTD & Airports | PORTS | VII |
| FOREST, WATERSHED, HORTICULTURE | FOREST | VIII |

ಈ ಕಾಮಗಾರಿಗಳನ್ನು ನಿರ್ವಹಿಸುವ ಸರ್ಕಾರದ ಎಲ್ಲಾ ಇಲಾಖೆಗಳು/ನಿಗಮ/ಮಂಡಳಿ/ ಸಂಸ್ಥೆಗಳು ತಕ್ಷಣದಿಂದಲೇ ಜಾರಿಗೆ ಬರುವಂತೆ ಸದರಿ ದರಗಳನ್ನು ಅಂದಾಜು ತಯಾರಿಕೆ, ಟೆಂಡರ್ ಪ್ರಕ್ರಿಯೆ ಮತ್ತು ಅನುಷ್ಠಾನಗೊಳಿಸುವಲ್ಲಿ ಅಳವಡಿಕೊಳ್ಳತಕ್ಕದ್ದು.

ಈ ಏಕರೂಪ ಅನುಸೂಚಿತ ಸಂಪುಟಗಳನ್ನು ಆಯಾ ಸಂಬಂಧಪಟ್ಟ ಇಲಾಖೆಗಳ ಹಾಗೂ ಲೋಕೋಪಯೋಗಿ ಇಲಾಖೆಯ ಅಂತರ್ಜಾಲದಲ್ಲಿ ಪ್ರಕಟಿಸುವುದು.

ವಿದ್ಯುತ್ ಇಲಾಖೆಗೆ ಸಂಬಂಧಿಸಿದಂತೆ ಮುಖ್ಯ ನಿರ್ಮಾಣ ಸಾಮಗ್ರಿಗಳಾದ Aluminum, copper, Steel, Insulating material, PVC/XLPE compound, CRGO core, Transformer oil ದರಗಳು IEEMA ಸುತ್ತೋಲೆಗಳ ಪ್ರಕಾರ ಪ್ರತಿ ತಿಂಗಳು ಏರುಪೇರು ಆಗುತ್ತಿದ್ದು, ಪ್ರತಿ ತ್ರೈಮಾಸಿಕ ಅವಧಿಗೆ ಅಥವಾ ಶೇ.10 ಕ್ಕಿಂತ ದರ ವ್ಯತ್ಯಾಸವಾದಲ್ಲಿ ಪರಿಷ್ಕೃತ ದರಗಳನ್ನು ನಿಯಮಾನುಸಾರ ಪ್ರಕಟಿಸುವುದು.



Scanned with CamScanner

ಶೇ. 12% ಜಿಎಸ್‌ಟಿ ಪ್ರತಿಶತವನ್ನು ಅಂದಾಜುಪಟ್ಟಿಯಲ್ಲಿ ಪ್ರತ್ಯೇಕವಾಗಿ ಸೇರ್ಪಡೆ ಮಾಡುವುದು.

ಗುತ್ತಿಗೆ ಅವಧಿಯನ್ನು ಗುತ್ತಿಗೆದಾರರ ವಿಳಂಬದಿಂದ ವಿಸ್ತರಿಸಿದಲ್ಲಿ ವಿಸ್ತೃತ ಗುತ್ತಿಗೆ ಅವಧಿಯಲ್ಲಿ ಆಗುವ ಜಿಎಸ್‌ಟಿ ಹೆಚ್ಚಳವನ್ನು ಗುತ್ತಿಗೆದಾರರೇ ಭರಿಸತಕ್ಕದ್ದು.

**ಈ ಅನುಸೂಚಿ ಏಕರೂಪ ದರಪಟ್ಟಿ ಸಂಪುಟ-IV, VI, VII ಮತ್ತು VIII ಕ್ಕೆ ಸಂಬಂಧಿಸಿದಂತೆ ಎಲ್ಲ ಸಾಧ್ಯತೆ ಮತ್ತು ಭಾದ್ಯತೆಗಳನ್ನು ಸಂಬಂಧಪಟ್ಟ (WRD, MI, KPCL-Vol IV, Escoms, KPTCL and PWD-Vol-VI, IDD, Ports- Vol-VII, Forest, Horticulture, Watershed department-Vol-VIII) ಇಲಾಖೆಗಳು ಹೊಂದಿರುತ್ತವೆ.**

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

ಬಿ.ಹೆಚ್. ಅನಿಲ್ ಕುಮಾರ್ 31/3/2022

**(ಬಿ.ಹೆಚ್. ಅನಿಲ್ ಕುಮಾರ್)**
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ಹಾಗೂ ಅಧ್ಯಕ್ಷರು, ಅನುಸೂಚಿ
ದರಗಳ ಪರಿಶೀಲನಾ ಸಮಿತಿ,
ಲೋಕೋಪಯೋಗಿ ಇಲಾಖೆ

ಇವರಿಗೆ:

1. ಮಹಾಲೇಖಪಾಲರು, (ಲೆಕ್ಕ ಪರೀಕ್ಷೆ-II), ಕರ್ನಾಟಕ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಇಂಧನ ಇಲಾಖೆ, ಬೆಂಗಳೂರು
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ಬೆಂಗಳೂರು.
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ, ಇಲಾಖೆ, ಬೆಂಗಳೂರು.
6. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಇಲಾಖೆ
7. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಮೂಲಸೌಕರ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ
8. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ವಸತಿ ಇಲಾಖೆ.
9. ಸರ್ಕಾರದ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ (ವೆಚ್ಚ), ಬೆಂಗಳೂರು.
10. ಸರ್ಕಾರದ ಕಾರ್ಯದರ್ಶಿಗಳು ಜಲಸಂಪನ್ಮೂಲ ಇಲಾಖೆ, ಬೆಂಗಳೂರು
11. ಸರ್ಕಾರದ ಕಾರ್ಯದರ್ಶಿಗಳು, ಸಣ್ಣನೀರಾವರಿ ಇಲಾಖೆ, ಬೆಂಗಳೂರು.
12. ಪ್ರಧಾನ ಇಂಜಿನಿಯರ್, ರಸ್ತೆ, ಯೋಜನೆ ಮತ್ತು ಆಸ್ತಿ ನಿರ್ವಹಣೆ ಕೇಂದ್ರ,(PRAMC), ಬೆಂಗಳೂರು- ಇವರು ಈ ಸಂಪುಟಗಳನ್ನು ಲೋಕೋಪಯೋಗಿ ಇಲಾಖೆಯ ಅಂತರ್ಜಾಲದಲ್ಲಿ ಪ್ರಕಟಿಸುವುದು.
13. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ), (ಉತ್ತರ), (ಈಶಾನ್ಯ) ಮತ್ತು ಕೇಂದ್ರ ವಲಯಗಳು, ಬೆಂಗಳೂರು, ಧಾರವಾಡ, ಕಲಬುರಗಿ, ಶಿವಮೊಗ್ಗ.
14. ಮುಖ್ಯ ಇಂಜಿನಿಯರ್, ಜಲಸಂಪನ್ಮೂಲ ಅಭಿವೃದ್ಧಿ ಸಂಸ್ಥೆ, ಆನಂದರಾವ್ ವೃತ್ತ, ಬೆಂಗಳೂರು -ತಮ್ಮ ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು



Scanned with CamScanner

Scanned with CamScanner